ಜಗತ್ತಿನ ಅಮರವಾದ ಐಶ್ವರ್ಯವೇ ಮಕ್ಕಳು

## ಮೂರನೆಯ
## ಜಿಲ್ಲಾ ಮಟ್ಟದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ
## ಮಕ್ಕಳ ಸಮ್ಮೇಳನ

# ಮಕ್ಕಳ ಲೋಕ(ರಿ.)

## ಮೈಸೂರು

# ಮಕ್ಕಳ ಮಲ್ಲಿಗೆ



21 ಮತ್ತು 22 ನವೆಂಬರ್ 1991

ಜಿಲ್ಲಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಕ್ಕಳ ಸಂಸ್ಥೆ, ಮೈಸೂರು–570 004

ಜಗತ್ತಿನ ಅಮರವಾದ ಐಶ್ವರ್ಯವೇ ಮಕ್ಕಳು

**ಮಕ್ಕಳಲೋಕ (ರಿ.)**

ಜಿಲ್ಲಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಕ್ಕಳ ಸಂಸ್ಥೆ

'ಶ್ರೀ ಸಾಯಿನಾಥ ಕೃಪಾ' 2711-ಎ, 2ನೇ ಮುಖ್ಯ ರಸ್ತೆ, ಮೇದರಕೇರಿ, ಚಾಮುಂಡಿಪುರಂ,
ಮೈಸೂರು-570 004

# ಮಕ್ಕಳ ಮಲ್ಲಿಗೆ

# ಸ್ಮರಣ ಸಂಚಿಕೆ

ಜಿಲ್ಲಾಮಟ್ಟದ ತೃತೀಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮಕ್ಕಳ ಸಮ್ಮೇಳನ ಮೈಸೂರು
ನವೆಂಬರ್ 21 ಮತ್ತು 22, 1991

ಜಗನ್ಮೋಹನ ಅರಮನೆ
ಮೈಸೂರು

## ಇಂದಿನ ಸಮ್ಮೇಳನದಲ್ಲಿ ಸನ್ಮಾನಿಸಲ್ಪಡುತ್ತಿರುವ ಸುಪ್ರಸಿದ್ಧ ಸಾಹಿತಿ ಡಾ॥ ಸಿದ್ದಯ್ಯ ಪುರಾಣಿಕ್ ಅವರ

## ಜೀವನ ವಿವರ



ಡಾ॥ ಸಿದ್ದಯ್ಯ ಪುರಾಣಿಕ್

ತಂದೆ, ತಾಯಿಗಳ ಹೆಸರು : ಪಂಡಿತ ಕಲ್ಲಿನಾಥ ಶಾಸ್ತ್ರೀ ಪುರಾಣಿಕ ಹಾಗೂ ಶ್ರೀಮತಿ ದಾನಮ್ಮ ಪುರಾಣಿಕ

ಹುಟ್ಟೂರು ಹೆಸರು: ದ್ಯಾಂಪುರ,ಯಲಬುರಗಿ ತಾಲ್ಲೂಕು, ರಾಯಚೂರು ಜಿಲ್ಲೆ.

ಜನ್ಮ : 18-6-1928

ವಿದ್ಯಾಭ್ಯಾಸ : ಕುಕ್ಕನೂರಿನ ವಿದ್ಯಾನಂದ ಗುರುಕುಲ, ಕಲಬುರಗಿಯ ಕಾಲೇಜು, ಹೈದರಾಬಾದಿನ ವಿಶ್ವವಿದ್ಯಾಲಯಗಳಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ, ಇಂಗ್ಲೀಷ್-ಕನ್ನಡಗಳಲ್ಲಿ ಪ್ರಥಮ ಸ್ಥಾನ, ಒಟ್ಟು ಅಂಕಗಳಲ್ಲಿ ತೃತೀಯ ಸ್ಥಾನ; ಇಂಟರ್ ಪರೀಕ್ಷೆಯಲ್ಲಿ ಕನ್ನಡ ಸಂಸ್ಕೃತಿಗಳಲ್ಲಿ ಪ್ರಥಮ ಸ್ಥಾನ, ಇಂಗ್ಲೀಷಿನಲ್ಲಿ ದ್ವಿತೀಯ ಸ್ಥಾನ; ಬಿ. ಎ. ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ ಹಾಗೂ ಒಟ್ಟಿನಲ್ಲಿ ಪ್ರಥಮ ಸ್ಥಾನ; ಎಲ್. ಎಲ್. ಬಿ. ಎರಡನೆಯ ವರ್ಷ ಸೇವೆಯಲ್ಲಿದ್ದೇ ಸಂಜೆ ಕಾಲೇಜು ಸೇರಿ ಉತ್ತೀರ್ಣ.

ಪಠ್ಯೇತರ : ಕಲಬುರಗಿ ಕಾಲೇಜು ಯೂನಿಯನ್ನಿನ ಕಾರ್ಯದರ್ಶಿ, ಕನ್ನಡ ಸಂಘದ ಕಾರ್ಯದರ್ಶಿ ಉಸ್ಮಾನಿಯಾ ವಿಶ್ವವಿದ್ಯಾಲಯ ಕರ್ನಾಟಕ ಸಂಘದ ಉಪಾಧ್ಯಕ್ಷ ಇತ್ಯಾದಿ. ಕಲಬುರಗಿಯಲ್ಲಿ, ಹೈದರಾಬಾದಿನಲ್ಲಿ ನಾಟಕಗಳನ್ನು ಬರೆದು ಮಿತ್ರರೊಡನೆ ಅಭಿನಯಿಸಿದುದು. ಕನ್ನಡ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದುದು.

ಸೇವಾ ಜೀವನ : 1943ರಲ್ಲಿ ತಹಸೀಲ್ದಾರನಾಗಿ ಆಯ್ಕೆ. ನಾಂದೇಡ, ಕಲಬುರಗಿ, ತಾಂಡೂರು, ಯಾದಗಿರಿ, ಬೆಂಗಳೂರು, ಮಡಕೇರಿ, ಬೆಳಗಾವಿಗಳಲ್ಲಿ ತಹಸೀಲ್ದಾರ, ಡೆಪ್ಯುಟಿ ಕಲೆಕ್ಟರ್ ಮತ್ತು ಪಿ. ಈ. ಓ. ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಮುಖ್ಯಾಧಿಕಾರಿ, ಜಿಲ್ಲಾಧಿಕಾರಿ, ಸಾರಿಗೆ ಕಮೀಷನರ್, ಕಾರ್ಮಿಕ ಕಮೀಷನರ್ ಆಗಿ ಕಾರ್ಯ ನಿರ್ವಹಣೆ. ಎಲ್ಲೆಲ್ಲೂ ಯಶಸ್ಸು, ಶ್ರೇಯಸ್ಸು.

ಕೃತಿಗಳು : ಕವನ ಸಂಗ್ರಹಗಳು— ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ (ರಾಜ್ಯ ಸರ್ಕಾರದ ಬಹುಮಾನದಕೃತಿ), ಮೊದಲು ಮಾನವನಾಗು, ಕಲ್ಲೋಲ ಮಾಲೆ, ಜರಗ, ಹಾಲ್ದೆನೆ, ಮರುಳ ಸಿದ್ಧನ ಕಂತೆ.

ನಾಟಕಗಳು : ಆತ್ಮಾರ್ಪಣ, ಭಾರತ ವೀರ, ರಜತ ರೇಖೆ, ಭಗ್ನನೂಪುರ (ಅಲ್ಲದೆ ಕೆಲವು ನಾಟಕಗಳು)

ಜೀವನ ಚರಿತ್ರೆಗಳು : ಶರಣ ಚರಿತಾಮೃತ, ಬಸವಣ್ಣನವರ ಜೀವನ ಹಾಗೂ ಸಂದೇಶ, ಮಹಾದೇವಿ, ಹರ್ಡೇಕರ್ ಮಂಜಪ್ಪನವರು, ಸಿದ್ಧರಾಮ, ಮಿರ್ಜಾಗಾಲಿಬ್, ಅಲ್ಲಮ ಪ್ರಭು (ಬಸವ ಸಮಿತಿ, ಬೆಂಗಳೂರು)

ಮಕ್ಕಳ ಸಾಹಿತ್ಯ : ತುಪ್ಪಾ ರೊಟ್ಟಿ ಗೇ ಗೇ ಗೇ (ಭಾರತ ಸರ್ಕಾರದ ಬಹುಮಾನ), ಗಿರ್ ಗಿಲ್ ಗಿಲಿಗಚ್ಚಿ, ತಿರುಗಲೆ ತಿರುಗಲೆ ತಿರುಗುಯ್ಯಾಲೆ, ನ್ಯಾಯ ನಿರ್ಣಯ (ನಾಟಕ), ಮಕ್ಕಳ ಲೋಕ ಸಂಚಾರ, ಬಣ್ಣ ಬಣ್ಣದ ಓಕುಳಿ, ಭಾರತವೆಲ್ಲಕೆ ಬಾವುಟವೊಂದೇ.

ಕಥಾ ಸಂಗ್ರಹ : ಕಥಾ ಮಂಜರಿ, ತುಷಾರಹಾರ.

ಕಾದಂಬರಿ : ತ್ರಿಭುವನ ಮಲ್ಲ.

ವಯಸ್ಕರ ಸಾಹಿತ್ಯ : ವಿಕಾಸ ವಾಣಿ.

ವಚನ ಸಂಗ್ರಹಗಳು : ವಚನೋದ್ಯಾನ, ವಚನ ನಂದನ.

ಅನುವಾದ : ನಜೀರ ಅಕಬರಾಬಾದಿ.

ಸಾಹಿತ್ಯೇತರ : ಗ್ರಾಮ ಸ್ವರಾಜ್ಯ, ಚಿಂತನ ಲಹರಿ.

ಸ್ವಂತವಾಗಿ ಮತ್ತು ಇತರರೊಡನೆ ಸಂಪಾದಿಸಿದ ಕೃತಿಗಳು : ಕನ್ನಡ ಪದ್ಯರತ್ನಾಕರ, ಶ್ರೀಕಾರ, ಪ್ರಬಂಧ ಮಾಲೆ, ಸುಬೋಧನ ಸಾರ, ಮಹಾತ್ಮ ಕನಕದಾಸ ಪ್ರಶಸ್ತಿ, ಸರಹವ್ ಗಾಂಧಿ, ಸಿದ್ಧಗಂಗಾಶ್ರೀ, ಮಣಿಹ, ಶರಣ ಪ್ರಸಾದಿ, ಬಸವ ಮತ್ತು ದಲಿತೋದಯ, ಬಸವ ಮತ್ತು ವಿಚಾರವಾದ, ಬಸವ ದರ್ಶನ ಇತ್ಯಾದಿ, ಮಳೆಯರಾಜ ಚಾರಿತ್ರ.

1. ಮನ್ನಣೆಗಳು : ಕರ್ನಾಟಕ ವಿಶ್ವವಿದ್ಯಾಲಯದಿಂದ ಡಿ. ಲಿಟ್. ಗೌರವ ಪದವಿ.

2. ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ—ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

3. ಹರಪನ ಹಳ್ಳಿಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ, ಮೈಸೂರಿನ ಸಮ್ಮೇಳನದಲ್ಲಿ ಲೇಖಕರ ಗೋಷ್ಠಿಯ ಅಧ್ಯಕ್ಷತೆ. ಕಲಬುರಗಿಯ ಸಮ್ಮೇಳನದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷತೆ, ಹೈದರಾಬಾದಿನಲ್ಲಿ ಕರ್ನಾಟಕ ಸಾಹಿತ್ಯ ಮಂದಿರದ ಉಪಾಧ್ಯಕ್ಷತೆ, ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮತ್ತು ಅಧ್ಯಕ್ಷನಾಗಿ ಹೈದರಾಬಾದು ಕರ್ನಾಟಕದಲ್ಲಿ ಅಪೂರ್ವ ಕನ್ನಡ ಹೋರಾಟ, ಬೀದರ್ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷತೆ, ದೆಹಲಿ ಸಮ್ಮೇಳನದಲ್ಲಿ ಕನ್ನಡ ಭವಿತವ್ಯ ಗೋಷ್ಠಿಯ ಅಧ್ಯಕ್ಷತೆ, ರಾಯಚೂರು ಕೊಡಗುಗಳ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆ,

ನವಿಲುಗುಂದದಲ್ಲಿ ಸರ್ವಧರ್ಮ ಸಮ್ಮೇಳನ ಅಧ್ಯಕ್ಷತೆ, ಹೈದರಾಬಾದಿನಲ್ಲಿ ಪಂಚಭಾಷಾ ಕವಿ ಸಮ್ಮೇಳನದ ಅಧ್ಯಕ್ಷತೆ, ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ಹಾಗೂ ಸರ್ವಧರ್ಮ ಸಮ್ಮೇಳನಗಳ ಅಧ್ಯಕ್ಷತೆ ಮೈಸೂರಿನಲ್ಲಿ ದಸರಾ ಕವಿ ಸಮ್ಮೇಳನದ ಅಧ್ಯಕ್ಷತೆ, ನವಿಲುಗುಂದದಲ್ಲಿ ವಚನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಕಲಬುರಗಿಯಲ್ಲಿ 58ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಇತ್ಯಾದಿ.

ಕಾರ್ಯಕ್ಷೇತ್ರ : ಕನ್ನಡ ನಿಘಂಟು ಸಮಿತಿಯ ಸದಸ್ಯ, ಕೇಂದ್ರ ಹಾಗೂ ಸಾಹಿತ್ಯ ಅಕಾಡೆಮಿ ಸದಸ್ಯನಾಗಿ ಸೇವೆ, ಬಸವ ಸಮಿತಿಯ ಉಪಾಧ್ಯಕ್ಷ ಹಾಗೂ ಇದುವರೆಗೆ 'ಬಸವ ಪಥ' ಹಾಗೂ 'ಬಸವ ಜರ್ನಲ್'ಗಳ ಪ್ರಧಾನ ಸಂಪಾದಕ, 'ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್' ನ ಅಧ್ಯಕ್ಷ, ಕರ್ನಾಟಕ ಜಾನಪದ ಟ್ರಸ್ಟಿನ ಟ್ರಸ್ಟೀ, ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯ ಸಮಿತಿಯ ಸದಸ್ಯ, ಡಾ: ಸರೋಜಿನಿ ಮಹಿಷಿ ಸಮಿತಿ, ಕನ್ನಡ ಗಡಿ ಸಮಿತಿ, ಇತ್ಯಾದಿಗಳಲ್ಲಿ ಸದಸ್ಯನಾಗಿ ಸೇವೆ, ರಾಜಾಜಿನಗರದ ಲಲಿತ ಕಲಾನಿಕೇತನದ ಅಧ್ಯಕ್ಷನಾಗಿ ಸೇವೆ, ಒಂದು ವರ್ಷಕ್ಕಿಂತ ಹೆಚ್ಚು ಕಾಲ 'ಲೋಕವಾಣಿ' ದಿನ ಪತ್ರಿಕೆಯ ಗೌರವ ಸಂಪಾದಕನಾಗಿ ಸೇವೆ, ಲೋಕ ಸೇವಾ ಆಯೋಗದಲ್ಲಿ ಡಾ: ದೇಜಗೌ ಅವರೊಡನೆ ನಿರಶನ ಸತ್ಯಾಗ್ರಹ, ಗೋಕಾಕ್ ಚಳುವಳಿಯಲ್ಲಿ ಪ್ರಮುಖ ಪಾತ್ರ, ಬಸವಣ್ಣನವರ ಹಾಗೂ ಅಕ್ಕಮಹಾದೇವಿಯ ವಚನಗಳ ಧ್ವನಿ ಸುರುಳಿಗಳ ನಿರ್ಮಾಣದಲ್ಲಿ ಮಹತ್ವದ ಪಾತ್ರ; ಟ್ರೆಂಟನ್ನಿನಲ್ಲಿ ನಡೆದ ಅಮೇರಿಕಾದ ಕನ್ನಡಿಗರ ಸಮ್ಮೇಳನದಲ್ಲಿ ಮುಖ್ಯ ಅತಿಥಿ, ಎಡೆಯೂರಿನಲ್ಲಿ ಸರ್ವ ಧರ್ಮ ಸಮ್ಮೇಳನದ ಅಧ್ಯಕ್ಷ—ಇತ್ಯಾದಿ.